# ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದ ದಲಿತೋದ್ಧಾರದ ಕಾರ್ಯಚಟುವಟಿಕೆಗಳು: ಕರ್ನಾಟಕವನ್ನು ಅನುಲಕ್ಷಿಸಿ

**ಸಣ್ಣ ರಾಘವೇಂದ್ರ[1] & ಎಸ್.ವಾಯ್. ಮುಗಳಿ[2]**

[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

[2]ಹಿರಿಯ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**DOI: https://doi.org/10.5281/zenodo.17411778**

## ABSTRACT:

ಕರ್ನಾಟಕದ ಇತಿಹಾಸವು ಸಿ.ಜೆ. ಥಾಮ್ಸನ್‌ರು ವಿವರಿಸಿದ ಶಿಲಾಯುಗದ ಮೂರು ಯುಗಗಳನ್ನು ತನ್ನ ಮಡಿಲಲ್ಲಿರಿಸಿಕೊಂಡಿದೆ. ಮಧ್ಯಯುಗದ ಬಸವ ಚಳುವಳಿ ಮತ್ತು ದಾಸ ಪರಂಪರೆಯು ಜಾತೀಯತೆ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಮುಂತಾದ ಸಾಮಾಜಿಕ ಪಿಡುಗುಗಳನ್ನು ವಿರೋಧಿಸಿತು. ಕರ್ನಾಟಕದಲ್ಲಿನ ದಲಿತರಾದ ಹೊಲೆಯರು, ಮಾದಿಗರು, ಜಾಡಮಾಲಿಗಳು, ಮಾಲರು, ಚೌಡಿಕೆ ಮಾದಿಗ, ಚಂಡಾಲರು ಮುಂತಾದ ಅಸ್ಪೃಶ್ಯ ಜಾತಿಗಳ ಸಮುದಾಯದವರು ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕವಾಗಿ ಶತಶತಮಾನಗಳಿಂದಲೂ ಬಹಿಷ್ಕೃತ ಜನಾಂಗವಾಗಿದ್ದಾರೆ.

ಆಧುನಿಕ ಕರ್ನಾಟಕವು, ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳನ್ನು ಸಮಾನಾಂತರವಾಗಿ ಕಂಡ ಐತಿಹಾಸಿಕ ಘಟನೆಗಳಾಗಿವೆ. ಇವುಗಳೆರಡರ ಮಧ್ಯ ಸ್ವಾತಂತ್ರ್ಯ ಹೋರಾಟದ ಭಾಗವಾಗಿಯೂ ಕೆಲವು ಸಾಮಾಜಿಕ ಕಾರ್ಯ ಚಟುವಟಿಕೆಗಳು ನಡೆದಿವೆ. ಈ ಲೇಖನವು ಮುಖ್ಯವಾಗಿ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ದಲಿತೋದ್ಧಾರದ ಕಾರ್ಯಚಟುವಟಿಕೆಗಳನ್ನು ಕುರಿತು ಚರ್ಚಿಸುತ್ತದೆ. ಇದರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ನಾಯಕರು ಹೊಂದಿದ್ದ ದಲಿತೋದ್ಧಾರದ ನೀತಿ ಹಾಗೂ ಧೋರಣೆಗಳನ್ನು ವಿವರಿಸುವುದರ ಜೊತೆಗೆ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಚಳುವಳಿಯ ಸ್ವರೂಪ ವಿಶೇಷವಾಗಿ ದಲಿತರ ಹಿತಾಸಕ್ತಿಗಾಗಿ ಮಾಡಿದ ಕೆಲಸಗಳನ್ನು ಉಲ್ಲೇಖಿಸುವುದು. ಅಂತಿಮವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖ ದಲಿತರು ಮತ್ತು ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರ ದಲಿತೋದ್ಧಾರದ ಕಾರ್ಯಗಳನ್ನು ವಿವರಿಸುವುದು. ಈ ಲೇಖನಕ್ಕೆ ಸಂಬಂಧಪಟ್ಟಂತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಕೈಗೊಂಡ ಪ್ರಮುಖ ದಲಿತೋದ್ಧಾರ ಕಾರ್ಯ ಚಟುವಟಿಕೆಗಳು ಮತ್ತು ನೀತಿಗಳನ್ನು ಒಳಗೊಂಡಂತೆ ಆಯ್ದ ವ್ಯಕ್ತಿಗಳಿಗೆ ಸೀಮಿತಗೊಳಿಸಲಾಗಿದೆ ಇನ್ನು ಲೇಖನದ ವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ದಲಿತೋದ್ಧಾರಕ್ಕಾಗಿ ನಡೆದ ಪ್ರಮುಖ ಸ್ಥಳಗಳಿಗೆ ಸೀಮಿತಗೊಳಿಸಲಾಗಿದೆ. ಇದನ್ನು ಐತಿಹಾಸಿಕ ವಿಧಾನವನ್ನು ಆಧರಿಸಿ ರಚಿಸಲಾಗಿದ್ದು ಕೆಲ ಭಾಗವು ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳಿಗೂ ಕೂಡಾ ಒತ್ತು ನೀಡಿ ರಚಿಸಲಾಗಿದೆ.

## KEYWORDS:

ದಲಿತೋದ್ಧಾರ, ಸ್ವಾತಂತ್ರ್ಯ ಚಳುವಳಿ, ಅಸ್ಪೃಶ್ಯತಾ ನಿವಾರಣೆ.

**ಕರ್ನಾಟಕದಲ್ಲಿನ ಸ್ವಾತಂತ್ರ್ಯ ಚಳುವಳಿಯ ಸ್ವರೂಪ:**

ಭಾರತದ ಸ್ವಾತಂತ್ರ್ಯ ಚಳುವಳಿಯು ಬಹುಮುಖವಾಗಿದ್ದು, ಇದು ರೈತರ ದಂಗೆಗಳು, ಕಾರ್ಮಿಕರ ಹೋರಾಟಗಳು, ದೇಶಿಯ ಅರಸರ ಪ್ರತಿರೋಧಗಳು, ಹಿಂಸಾತ್ಮಕ ದಂಗೆಗಳು ಮತ್ತು ಮಹಾತ್ಮ ಗಾಂಧೀಜಿಯವರ ಪ್ರೇರಿತ ಅಸಹಕಾರ ಚಳುವಳಿ, ಕಾನೂನು ಭಂಗ ಚಳುವಳಿ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿಗಳ ಹೋರಾಟಗಳು ಕರ್ನಾಟಕದ ಚರಿತ್ರೆಯಲ್ಲಿ ದಾಖಲಾಗಿವೆ. ಯುವಕರು, ವಿದ್ಯಾರ್ಥಿಗಳು ಮತ್ತು ಮಹಿಳಾ ಕಾರ್ಯಕರ್ತರು ಈ ಎಲ್ಲಾ ಸಮೂಹ ಚಳುವಳಿಯಲ್ಲಿ ಪಾಲ್ಗೊಂಡರು. ಅದೇ ರೀತಿ ದೇಶಿಯ ಪತ್ರಿಕೆಗಳು ರಾಷ್ಟ್ರೀಯತೆಯ ಭಾವನೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಕರ್ನಾಟಕದಲ್ಲಿನ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ಪ್ರಮುಖವಾಗಿ ಮುಂದಿನಂತೆ ವಿವರಿಸಲಾಗಿದೆ. ಮೊದಲನೆಯದಾಗಿ ಉಭಯಗುರಿಯಾಗಿದ್ದು, ಈ ಚಳುವಳಿಯು ಭಾರತಕ್ಕೆ ಸ್ವಾತಂತ್ರ್ಯವನ್ನು ಪಡೆಯುವುದರ ಜೊತೆಗೆ ಕರ್ನಾಟಕದ ಏಕೀಕರಣ ಕಾರ್ಯವನ್ನು ಸಹ ಕೈಗೊಂಡಿತ್ತು. ಎರಡನೇಯದಾಗಿ, ಚಳುವಳಿಯು ಹಿಂಸಾತ್ಮಕ ಮತ್ತು ಅಹಿಂಸಾತ್ಮಕ ಹಂತಗಳನ್ನು ಒಳಗೊಂಡಿತ್ತು. ಮೂರನೇಯದಾಗಿ, ಸಾಮೂಹಿಕ ಭಾಗವಹಿಸುವಿಕೆಯಾಗಿದ್ದು, ಕರ್ನಾಟಕದಲ್ಲಿನ ಸ್ವಾತಂತ್ರ್ಯ ಚಳುವಳಿಯು ರೈತ, ಕಾರ್ಮಿಕರು ಸೇರಿದಂತೆ ವಿದ್ಯಾರ್ಥಿಗಳು, ಮಹಿಳೆಯರು, ವಕೀಲರು, ಬುದ್ಧಿ ಜೀವಿಗಳು ಸಾಮಾಜಿಕ ಭಾಗವಹಿಸುಕೆಯನ್ನು ಕಂಡಿತು.

**ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ನಾಯಕರ ದಲಿತೋದ್ಧಾರದ ನೀತಿ ಹಾಗೂ ಧೋರಣೆಗಳು:**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 1885 ರಿಂದ 1905ರ ಮಂದಗಾಮಿ ಯುಗದಲ್ಲಿ ದಲಿತೋದ್ಧರಕ್ಕಾಗಿ ಯಾವುದೇ ಕಾರ್ಯಚಟುವಟಿಕೆಗಳನ್ನು ರೂಪಿಸಲಿಲ್ಲ. ಸಮಸ್ಯೆಯನ್ನು ಸಮಾಜೋಧಾರ್ಮಿಕವೆಂದು ಪರಿಗಣಿಸಿ ರಾಜಕೀಯ ಕಾರ್ಯಕ್ರಮಗಳಿಂದ ದೂರವಿರಿಸಿತು. ಕೆಲ ಸಂದರ್ಭದಲ್ಲಿ ನಿರ್ಲಕ್ಷ ಮತ್ತು ನೇರವಾಗಿ ವಿರೋಧಪಡಿಸಿದ ಉದಾಹರಣೆಗಳಿವೆ. 1885ರ ಮೊದಲ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಶೋಷಿತ ನಾಯಕರಾಗಿದ್ದ ಕೇಶವ ಪಿಳ್ಳೆಯವರನ್ನು ಸರ್ವಸಮ್ಮತಿಯ ಮೇರೆಗೆ ಕಾರ್ಯಕಾರಣಿ ಸಮಿತಿಯ ಮಹಾ ಕಾರ್ಯದರ್ಶಿಯನ್ನಾಗಿ ನೇಮಿಸಿತ್ತು. 1886ರ ಎರಡನೇ ಅಧಿವೇಶದಲ್ಲಿ ಸಾಮಾಜಿಕ ಸುಧಾರಣೆಗಿಂತ ರಾಜಕೀಯ ಚಳುವಳಿ ಮುಖ್ಯವೆಂದು ಅದರ ಅಧ್ಯಕ್ಷರಾದ ದಾದಾಬಾಯಿ ನವರೋಜಿ ಅವರ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. "National Congress must confine itself to the question in which the entire nation has a direct participation and it must leave the adjustment of social reforms and other questions to class Congress." 1887 ಅಧಿವೇಶನದಲ್ಲಿ ಮೊದಲ ಬಾರಿಗೆ ಸಾಮಾಜಿಕ ಸಮ್ಮೇಳನ ಆರಂಭವಾಯಿತಾದರೂ 1890 ರಲ್ಲಿ ವಿರೋಧ ವ್ಯಕ್ತವಾಗಿ ಪುಣೇಕರ್ ಶಾಸ್ತ್ರಿಯವರ ಪ್ರತ್ಯೇಕ ಸಭೆಯಿಂದ ಕಾಂಗ್ರೆಸ್ ವೇದಿಕೆಯಲ್ಲಿ ಸಾಮಾಜಿಕ ಸಮ್ಮೇಳನ ಮಾಡಬಾರದೆಂದು ಹೇಳಲಾಯಿತು.

ಮಹಾತ್ಮ ಪುಲೆಯವರು ಅಂದಿನ ಕಾಂಗ್ರೆಸ್ ಸ್ವರೂಪ ಮತ್ತು ಕಾರ್ಯಾಚಟುವಟಿಕೆಯನ್ನು ನೋಡಿ ಅದು ಪುರೋಗಾಮಿ ಮತ್ತು ಮಾರ್ವಾಡಿಗಳ ಅನ್ಯೈಕ್ಯ ಕೂಟವೆಂದು ಕರೆದಿದ್ದಾರೆ. ಈ ಹೇಳಿಕೆಗೆ ಮುಖ್ಯ ಕಾರಣವೆಂದರೆ ಅಂದಿನ ಕಾಂಗ್ರೆಸ್ ಶೋಷಿತ ಸಮುದಾಯಗಳ ಬಗ್ಗೆ ತೋರಿದ ನಿರ್ಲಕ್ಷ ಧೋರಣೆಯಾಗಿತ್ತು. ತೀವ್ರಗಾಮಿ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಹಂತ ಹಂತವಾಗಿ ಸಾಮಾಜಿಕ ಬದಲಾವಣೆಯನ್ನು ಮಾಡಬಯಸಿದ್ದರು ಬಾಲಗಂಗಾಧರ್ ತಿಲಕ್, ಬಿಪಿನ್ ಚಂದ್ರ ಪಾಲ್, ಮತ್ತು ಲಾಲಾ

ಲಜಪತ್ ರಾಯರು ವರ್ಣಾಶ್ರಮ ಆಧಾರಿತ ಜಾತಿ ವ್ಯವಸ್ಥೆಯಲ್ಲಿ ನಂಬಿಕೆಯುಳ್ಳವರಾಗಿದ್ದರು. ತಿಲಕರು ಈ ರೀತಿಯ ಕ್ಷಿಪ್ರ ಬದಲಾವಣೆಯಿಂದ ಸಾಮಾಜಿಕ ಸ್ವಾಸ್ಥ್ಯ ಹಾಳಾಗುವುದೆಂದು ವಾದಿಸಿದರು. ಮುಂದುವರೆದು "ಒಂದು ವೇಳೆ ದೇವರು ಅಸ್ಪೃಶ್ಯತೆ ಯನ್ನು ಮಾನ್ಯ ಮಾಡುವುದಾದರೆ ನಾನು ಆ ದೇವರನ್ನು ದೇವರೆಂದು ಮಾನ್ಯ ಮಾಡಲಾರೆ" ಎಂದ ತಿಲಕರು ಸಾಮಾಜಿಕ ಪರಿವರ್ತನೆಯ ಕಾರ್ಯಗಳನ್ನು ಕೈಗೊಳ್ಳಲು ನಿರಾಕರಿಸಿದ್ದು ವೈರುಧ್ಯದ ಸಂಗತಿಯಾಗಿದೆ.[1]

1917ರಲ್ಲಿ ನಡೆದ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಅಸ್ಪೃಶ್ಯರ ಏಳಿಗೆಯನ್ನು ಕಾಂಗ್ರೆಸ್ ತನ್ನ ಕಾರ್ಯಚಟುವಟಿಕೆಯ ಭಾಗವನ್ನಾಗಿ ಸೇರಿಸಿಕೊಂಡಿತು. ನವಂಬರ್ 11, 1917 ರಂದು ಕಾಂಗ್ರೆಸ್ ನಾಯಕರದ ಸರ್ ನಾರಾಯಣ್ ಚಂದಾವರ್ಕರ್ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಶೋಷಿತರ ಉದ್ಧಾರಕ್ಕೆ ಕೆಲವು ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಅದರಲ್ಲಿ ಮೊದಲನೆಯದಾಗಿ ಅಸ್ಪೃಶ್ಯರ ಹೀನಾಯ ಪರಿಸ್ಥಿತಿಯನ್ನು ಸುಧಾರಿಸುವುದು, ಅವರು ತಮ್ಮ ಜನಸಂಖ್ಯೆಗನುಗುಣವಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವಂತೆ ಬ್ರಿಟಿಷ್ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಎರಡನೆಯದಾಗಿ ಕಡ್ಡಾಯ ಶಿಕ್ಷಣ ಹಾಗೂ ಉಚಿತವಾಗಿರಬೇಕೆಂದು ಮುಂತಾದ ಸಾಮಾಜಿಕ ಕಾರ್ಯಗಳನ್ನು ಸ್ಪಷ್ಟಪಡಿಸುವಂತೆ ಶಿಂಧೆಯವರಿಗೆ ಅಧಿಕಾರ ನೀಡಲಾಯಿತು.

ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಧೋರಣೆಯನ್ನು ಅವಲೋಕಿಸುವುದಾದರೆ, 1918ರಲ್ಲಿ ಬಿಜಾಪುರದಲ್ಲಿ ನಡೆದ ಕಾಂಗ್ರೆಸ್ ಪ್ರಾದೇಶಿಕ ಸಮಾವೇಶಕ್ಕೆ ಮಹಾತ್ಮ ಗಾಂಧೀಜಿಯವರು ಆಗಮಿಸಿದ್ದರು. ಈ ಸಮಯದಲ್ಲಿ ಅಸ್ಪೃಶ್ಯತೆಗೆ ಸಂಬಂಧಿಸಿದಂತೆ ಒಂದು ಗೊತ್ತುವಳಿಯನ್ನು ಕುರಿತು ಭಾಷಣ ಮಾಡಬೇಕೆಂದು ಕೇಳಿಕೊಂಡಾಗ ವೀಕ್ಷಕ ವರ್ಗದಲ್ಲಿ ಒಬ್ಬರೂ ಕೂಡ ಅಸ್ಪೃಶ್ಯರಿಲ್ಲವಾದ್ದರಿಂದ ಗಾಂಧೀಜಿಯವರು ಮೌನವಹಿಸಿದರು. 1920ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ರಚನಾತ್ಮಕ ಕಾರ್ಯಕ್ರಮಗಳ ಭಾಗವಾಗಿ ಅಸ್ಪೃಶ್ಯತಾ ನಿವಾರಣೆಗೆ ಒತ್ತು ನೀಡಿದರು. 1921ರ ಅಹಮದಾಬಾದ್ ಅಧಿವೇಶನದಲ್ಲಿ ದಲಿತೋದ್ಧಾರ ಕುರಿತು ನಿಖರ ಗೊತ್ತುವಳಿಗಳನ್ನು ಉಲ್ಲೇಖಿಸಿ ದಲಿತೋದ್ಧಾರ ಕುರಿತಂತೆ ಕಾರ್ಯಕರ್ತರೆಲ್ಲರು ಪ್ರತಿಜ್ಞಾಪತ್ರಕ್ಕೆ ಸಹಿ ಹಾಕುವಂತೆ ಸೂಚಿಸಲಾಯಿತು 1922ರ ಅಧಿವೇಶನದಲ್ಲಿ ಅತಿ ಹೆಚ್ಚಾಗಿ ಅಸ್ಪೃಶ್ಯತಾ ಆಚರಿಸುತ್ತಿರುವ ಸ್ಥಳಗಳಲ್ಲಿ ಪ್ರತ್ಯೇಕ ಶಾಲೆ, ಬಾವಿ ಮುಂತಾದವುಗಳನ್ನು ನಿರ್ಮಿಸಬೇಕೆಂಬ ತೀರ್ಮಾನವನ್ನು ಕೈಗೊಳ್ಳಲಾಯಿತು. ಮುಖ್ಯವಾಗಿ ದಲಿತೋದ್ಧಾರಕ್ಕಾಗಿ ಸಮಿತಿಯೊಂದನ್ನು ನೇಮಕ ಮಾಡಿ ಅದು ಸ್ವಾಮಿ ಶ್ರದ್ಧಾನಂದ, ಗಂಗಾಧರ ದೇಶಪಾಂಡೆ ಮತ್ತು ಸರೋಜಿನ್ ನಾಯ್ಡು ಅವರನ್ನು ಒಳಗೊಂಡಿತ್ತು. 1924 ಅಧಿವೇಶದಲ್ಲಿ ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆ ಸ್ವರಾಜ್ಯ ಸ್ಥಾಪನೆಗೆ ತೊಡಕಾಗಿದ್ದು ಇದರ ನಿರ್ಮೂಲನೆ ಅತ್ಯವಶ್ಯಕವೆಂದರು. ವಿಶೇಷವಾಗಿ ಈ ಶೋಷಿತ ಸಮುದಾಯದ ವರ್ಗಕ್ಕೆ ಹಕ್ಕು ಮತ್ತು ಸ್ವಾತಂತ್ರ್ಯ ನೀಡದೆ ಬ್ರಿಟಿಷರಿಂದ ನಾವು ಸ್ವತಂತ್ರ ಪಡೆಯುವುದು ಅಸಾಧ್ಯವೆಂದರು. ಇದೆ ಅವಧಿಯಲ್ಲಿ ಕಾಂಗ್ರೆಸ್ಸಿನ ಕಾರ್ಯ ಚಟುವಟಿಕೆಯ ಭಾಗವಾಗಿ ಶೋಷಿತರ ಉದ್ಧಾರ ಒಳಗೊಂಡಿತಾದರೂ ಅದರ ಜಾರಿಮ ಬಗ್ಗೆ ಆರೋಪ ಮತ್ತು ಪ್ರತ್ಯಾರೋಪದಿಂದ ಕೂಡಿದೆ.[2]

1932ರ ಪೂನಾ ಒಪ್ಪಂದದ ನಂತರದ ಕಾಂಗ್ರೆಸ್ ಧೋರಣೆಯನ್ನು ನೋಡುವುದಾದರೆ, 1919 ರಿಂದ 1931ರವರೆಗಿನ ಪತ್ರಿಕೆಯಾದ Young India (Weekly English) ಪತ್ರಿಕೆಯು, 1933 ರಲ್ಲಿ ಹರಿಜನ್ ಆಗಿ ಬದಲಾಯಿತು. ಇದರ ಜೊತೆಗೆ "Anti

Untouchability League'' 'ಹರಿಜನ ಸೇವಕ ಸಂಘ'ವೆಂದು ಕರೆದರು. ಇದರ ಭಾಗವಾಗಿ 1933 ನವೆಂಬರ್ ತಿಂಗಳಿನಿಂದ 1934ರ ಆಗಸ್ಟ್ ರ ವರೆಗೆ ಒಟ್ಟು 10 ತಿಂಗಳುವರೆಗೆ ಶೋಷಿತರ ಪ್ರವಾಸ ಕೈಗೊಂಡರು. 1932 ರ ಪೂನಾ ಒಪ್ಪಂದದ ನಂತರ ಗಾಂಧೀಜಿಯವರು ದಲಿತರ ಪ್ರಶ್ನೆಯನ್ನು ಅತ್ಯಂತ ಗಂಭೀರವಾಗಿ ಕೈಗೊಂಡರು. ಪ್ರತಿ ಜಿಲ್ಲಾಕೇಂದ್ರಗಳನ್ನೊಳಗೊಂಡಂತೆ ಪ್ರಮುಖ ಪಟ್ಟಣಗಳಲ್ಲಿ 'ಹರಿಜನ ಸೇವಕ ಸಂಘ'ಗಳನ್ನು ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಹಾತ್ಮ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ರಾಷ್ಟ್ರೀಯವಾದಿಗಳಿಗೆ ತಿಳಿದಿತ್ತಾದರೂ ಅಧಿಕ ಜನಸಂಖ್ಯೆಯಲ್ಲಿ ಕೆಲಸ ಮಾಡಲು ಸಿದ್ಧರಿರಲಿಲ್ಲವೆಂಬುದು ಸತ್ಯಾಂಶವಾಗಿದೆ. 1936ರ ಫೈಜ್ ಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತೊಗೆಯುವಂತೆ ಗಾಂಧೀಜಿಯು ಆಗ್ರಹಿಸಿದರು. ಮುಂದೆ ಕಾಂಗ್ರೆಸ್ ತನ್ನ ಕಾರ್ಯಸೂಚಿಗಳಲ್ಲಿ ದಲಿತೋದ್ಧಾರ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ದೇಶದ ಪ್ರಾಂತೀಯ ಕಾಂಗ್ರೆಸ್ ಸಭೆಯಲ್ಲಿ ಮನವೊಲಿಸಿದರು. ಮುಂದಿನ ಕಾಂಗ್ರೆಸ್ ನ ಅಧಿವೇಶನದಲ್ಲಿ ತೀರ್ಮಾನಿಸಿದಂತೆ 1937 ರಲ್ಲಿ ರಚಿತವಾದ ಪ್ರಾಂತೀಯ ಸರ್ಕಾರಗಳು ಅಸ್ಪೃಶ್ಯತೆ ನಿರ್ಮೂಲನೆ ಮಾಡುವಲ್ಲಿ ಪ್ರಮುಖ ಕಾನೂನುಗಳನ್ನು ಜಾರಿಗೆ ತಂದವು. ಉದಾಹರಣೆಗೆ 1938 ರಲ್ಲಿ ಮದ್ರಾಸ್ ಸರ್ಕಾರವು ಜಾರಿಗೆ ತಂದ "The Removal of Civil Disabilities Act" ಬಿಹಾರದಲ್ಲಿ ಉಚಿತ ಶಿಕ್ಷಣ ಜಾರಿಗೆಯಾಯ್ತು. 1937ರಿಂದ 1942ರವರೆಗಿನ ಕಾಂಗ್ರೆಸ್ ಶೋಷಿತರ ಬಗ್ಗೆ ಯಾವುದೇ ಕ್ರಾಂತಿಕಾರಕ ಸುಧಾರಣೆಗಳನ್ನು ಕೈಗೊಳ್ಳಲಿಲ್ಲ. ಒಟ್ಟಾರೆಯಾಗಿ ಕಾಂಗ್ರೆಸ್ಸಿನ ಧೋರಣೆಯು ಕಾಲಕಾಲಕ್ಕೆ ಬದಲಾವಣೆ ಹೊಂದಿದನ್ನು ಇಲ್ಲಿ ಗಮನಿಸಬಹುದು.

**ಅಸ್ಪೃಶ್ಯತೆಯ ನಿವಾರಣೆ:**

16/08/1931ರ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಗಾಂಧೀಜಿಯವರು ಅಸ್ಪೃಶ್ಯತೆಯ ಕುರಿತು 'ಹಿಂದೂಸ್ತಾನದಲ್ಲಿನ ಈ ದುಸ್ಥಿತಿಗೆ ಸಮಾನವಾದ ಮತ್ತೊಂದು ಸ್ಥಿತಿ ಪ್ರಪಂಚದಲ್ಲಿಲ್ಲ. ಅಸ್ಪೃಶ್ಯತೆ ತೊಲಗದೆ ಪೂರ್ಣ ಸ್ವರಾಜ್ಯವನ್ನು ಪಡೆದರೂ ಅದಕ್ಕೆ ಅರ್ಥವಿಲ್ಲವೆಂದರು. 1934ರಲ್ಲಿ ದಲಿತರ ಒಳಿತಿಗಾಗಿ ನಿಧಿ ಸಂಗ್ರಹಿಸುತ್ತಾ ಕೊಡಗಿನ ಕೈಕೇರಿಯ ದಲಿತರ ಕೇರಿಗೆ ಆಗಮಿಸಿದರು.[3] 1934 ರ ಫೆಬ್ರುವರಿ 25 ರಂದು ಉಡುಪಿಗೆ ಭೇಟಿ ಕೊಟ್ಟಾಗ ಶ್ರೀಕೃಷ್ಣನ ಸನ್ನಿಧಾನಕ್ಕೆ ದಲಿತರಿಗೂ ಪ್ರವೇಶ ನೀಡಬೇಕೆಂದರು. ಅಸಹಕಾರ ಚಳುವಳಿ ಮತ್ತು 1924ರ ಬೆಳಗಾವಿಯ ಅಧಿವೇಶನದಲ್ಲಿ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು ರಚಿಸಿದ ಶಿವಲಿಂಗೇಶ್ವರ ನಾಟ್ಯ ಸಂಘದ 'ಅಸ್ಪೃಶ್ಯತಾ ನಿವಾರಣೆ' ನಾಟಕವನ್ನು ಪ್ರದರ್ಶಿಸಲಾಗುತ್ತದೆ. ಗರೂಡ ಸದಾಶಿವರಾಯರು 1930 ರಲ್ಲಿ 'ಸತ್ಯ ಸಂಕಲ್ಪ', 1936 ರಲ್ಲಿ 'ನಮ್ಮ ಭಾಗ್ಯೋದಯ' ಎನ್ನುವ ನಾಟಕಗಳನ್ನು ಪ್ರದರ್ಶಿಸಿದರು. ಇವುಗಳಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸುವಂತಹ ಅಂಶಗಳನ್ನು ಸೇರಿಸಿದರು. ಕಂದಗಲ್ ಹನುಮಂತರಾಯರು 'ತಮ್ಮ ಮಾತಂಗ ಕನ್ನೆ' ಎನ್ನುವ ನಾಟಕದಲ್ಲಿ ಒಬ್ಬಾಕೆ ದಲಿತ ಸ್ತ್ರೀಯ ಮೇಲೆ ಸವರ್ಣೀಯ ವ್ಯಕ್ತಿಯೋರ್ವನ ದೌರ್ಜನ್ಯ, ಕ್ರೌರ್ಯವನ್ನು ಖಂಡಿಸುವುದು ವಿಶೇಷವಾಗಿದೆ.[4]

**ದಲಿತೋದ್ಧಾರದ ಕಾರ್ಯಚಟುವಟಿಕೆಗಳನ್ನು ಕೈಗೊಂಡ ಪ್ರಮುಖ ನಾಯಕರು:**

ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಕಾಲದ ಆಯ್ದ ದಲಿತೋದ್ಧಾರದ ಕಾರ್ಯಚಟುವಟಿಕೆ ಕೈಗೊಂಡ ಬಗ್ಗೆ ಹಾಗೂ ಅವುಗಳ ಕಾರ್ಯರೂಪಕ್ಕೆ ತಂದ ಪ್ರಮುಖ ನಾಯಕರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**ಕುದ್ಮಲ್ ರಂಗರಾವ್(1859–1928):**

ದಕ್ಷಿಣ ಕನ್ನಡದ ಕುದ್ಮಲ್ ರಂಗರಾವರು ಡಾ. ಬಾಬಾ ಸಾಹೇಬ್ ಮತ್ತು ಗಾಂಧೀಜಿಯವರಿಗಿಂತಲೂ ಮೊದಲೇ ಅಸ್ಪೃಶ್ಯತೆಯ ವಿರುದ್ಧ ಹೋರಾಟ ನಡೆಸಿದ ಮಹನೀಯರು. ಮಹಾತ್ಮ ಬುದ್ಧ ಮತ್ತು ಬಸವಣ್ಣನವರ ಚಿಂತನೆಗಳಿಂದ ಪ್ರಭಾವಿತರಾಗಿ ಅಸ್ಪೃಶ್ಯರ ಏಳಿಗೆಗಾಗಿ ಪ್ರಾಮಾಣಿಕವಾಗಿ ಶ್ರಮಿಸಿದವರು. ಅಂದಿನ ಸಮಾಜದಲ್ಲಿನ ಶೋಷಿತರ ಪರ ಹೋರಾಡುವ ದೃಷ್ಟಿಯಿಂದ ಅಧ್ಯಾಪಕ ವೃತ್ತಿಯನ್ನು ತ್ಯಜಿಸಿ ವಕೀಲರಾದರು. ಸವರ್ಣೀಯನಿಂದ ಅತ್ಯಾಚಾರಕ್ಕೊಳಗಾದ ದಲಿತ ಮಹಿಳೆಗೆ ನ್ಯಾಯ ಒದಗಿಸಿ "ನನ್ನ ಜೀವನದ ಸಾರ್ಥಕತೆ ಮುಗ್ಧ ದಲಿತರ ಏಳ್ಗೆಯಲ್ಲಿದೆ" ಎನ್ನುವ ಮಾತನ್ನು ಪುನರುಚ್ಚರಿಸಿದರು.[5]

1892 ರಲ್ಲಿ ಮಂಗಳೂರಿನ ಹಳ್ಳಿಯೊಂದರಲ್ಲಿ ದಲಿತ ಮಕ್ಕಳ ಶೈಕ್ಷಣಿಕ ದೃಷ್ಟಿಯಿಂದ ಹುಲ್ಲು ಛಾವಣಿಯ ಬಾಡಿಗೆಯೊಂದನ್ನು ಪಡೆದು ಶಾಲೆಯನ್ನು ಆರಂಭಿಸಿದರು. ಈ ಕಾರ್ಯಕ್ಕೆ ಸವರ್ಣೀಯರಿಂದ ಬೆದರಿಕೆ ಬಂದರೂ ಮಂಗಳೂರಿನ ಸುತ್ತಮುತ್ತಲಿನ ದಡ್ಡಲ್ ಕಾಡು, ಅತ್ತಾವರ, ನೇಜಾರು, ಶೇಡಿಗುಡ್ಡೆ, ಬಾಬುಗುಡ್ಡೆ, ಕಂಕನಾಡಿ, ಉಳ್ಳಾಲ, ಮುಲ್ಕಿ, ಬೋಳೂರು, ಬನ್ನಂಜೆ, ಉಡುಪಿ ಮುಂತಾದ ಕಡೆಗಳಲ್ಲಿ ದಲಿತ ಮಕ್ಕಳಿಗಾಗಿ ಶಾಲೆಗಳನ್ನು ತೆರೆದು ಅವುಗಳನ್ನು 'ಪಂಚಮ ಶಾಲೆ'ಗಳೆಂದು ಕರೆದರು. ದಲಿತ ಮಕ್ಕಳನ್ನು ಶಿಕ್ಷಣಕ್ಕೆ ಆಕರ್ಷಿಸಲು ಮಧ್ಯಾಹ್ನದ ಬಿಸಿಯೂಟ ಮತ್ತು ಪ್ರತಿದಿನ ಎರಡರಿಂದ ಆರು ಪೈಸೆ ಶಿಷ್ಯವೇತನ ಕೊಟ್ಟು ಪ್ರೋತ್ಸಾಹಿಸಿದರು. ದಲಿತರ ಆರ್ಥಿಕ ಸುಧಾರಣೆಗಾಗಿ 'ಕರ್ಟ್ ಹಿಲ್ ಆದಿ ದ್ರಾವೀಡ ಸಹಕಾರ ಸಂಘ'ವನ್ನು ಸ್ಥಾಪಿಸಿದರು. ಸ್ವಾತಂತ್ರ್ಯ ಚಳುವಳಿಯ ಆರಂಭದಲ್ಲಿಯೇ ಅಸ್ಪೃಶ್ಯತಾ ನಿವಾರಣಾ ಕಾರ್ಯ ಮತ್ತು ದಲಿತೋದ್ಧಾರ ಕಾರ್ಯ ಚಟುವಟಿಕೆಗಳಲ್ಲಿ ಕುದ್ಮಲ್ ರಂಗರಾವರ ಕೊಡುಗೆ ಚಿರಸ್ಮರಣೀಯವಾಗಿದೆ.

**ಸಿದ್ದಪ್ಪ ಹೊಸಮನಿ (1879–1959):**

ಉತ್ತರ ಕರ್ನಾಟಕದ ಪ್ರಸಿದ್ಧ ರಾಷ್ಟ್ರೀಯವಾದಿ ನಾಯಕರು ಮತ್ತು ಅಂದಿನ ಬಾಂಬೆ ಕರ್ನಾಟಕದ ಸಾಮಾಜಿಕರಾಜಕೀಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸಿದ ಹೊಸಮನಿ ಸಿದ್ದಪ್ಪರವರು ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳ ಭಾಗವಾಗಿ ಹಲವಾರು ದಲಿತೋದ್ಧಾರ ಕಾರ್ಯಗಳನ್ನು ಮಾಡಿದರು. ಅವರು ಸವರ್ಣೀಯರಿಗೆ ಅಸ್ಪೃಶ್ಯತೆಯನ್ನು ತ್ಯಜಿಸಿರಿ ಎಂದು ಕೇಳಿಕೊಂಡರು. ಸಿದ್ದಪ್ಪರವರ ಸಾಮಾಜಿಕ ಸುಧಾರಣೆಯ ಹೋಲಿಕೆಯೂ ಸಹ ಡಾ. ಅಂಬೇಡ್ಕರ್ ಅವರ ಪರಿಹಾರ ಕ್ರಮಗಳಾದ ಅಂತರ್ಜಾತಿ ವಿವಾಹಗಳು, ಅಂತರ್ ಭೋಜನ ಹೋಲುತ್ತದೆ. ಸುಧಾರಣೆಯು ಸಮಾಜದ ಮೇಲ್ವರ್ಗದಿಂದ ಪ್ರಾರಂಭವಾಗಬೇಕು ಮತ್ತು ಸಮಾಜದಲ್ಲಿ ಅವರಿಂದ ಪ್ರಾರಂಭವಾದ ಈ ಅಸ್ಪೃಶ್ಯತೆಯ ನಿರ್ಮೂಲನೆಯೂ ಸಹ ಮೇಲ್ಜಾತಿಗಳಿಂದ ಪ್ರಾರಂಭವಾಗಬೇಕು ಎನ್ನುವುದು ಅಭಿಪ್ರಾಯವಾಗಿತ್ತು. ಇವರು ದಲಿತೋದ್ಧಾರಕ್ಕಾಗಿ ಮಾಡಿದ ಕೆಲವು ಕಾರ್ಯಗಳೆಂದರೆ, ಶೋಷಿತ ವರ್ಗಗಳ ಜನರು ಸಾರ್ವಜನಿಕ ಕೆರೆಯಿಂದ ನೀರನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟರು. ಕರ್ನಾಟಕ ಪ್ರಾಂತ್ಯದ 'ಹರಿಜನ ಸೇವಕ ಸಂಘ'ದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. 1931ರಲ್ಲಿ ಹುಬ್ಬಳ್ಳಿಯಲ್ಲಿ ವೀರಣ್ಣಗೌಡ ಪಾಟೀಲ್ ಮತ್ತು ಅವರ ಪತ್ನಿ ಶ್ರೀಮತಿ ನಾಗಮ್ಮ ಪ್ರಾರಂಭಿಸಿದ ದಲಿತ ಬಾಲಿಕಾ ಆಶ್ರಮದ ನಿರ್ವಹಣೆಯಲ್ಲಿ ಭಾಗಿಯಾಗಿದ್ದರು. ಮಹಾತ್ಮ ಗಾಂಧೀಜಿಯವರ ಆಶಯದಂತೆ 1933 ರಲ್ಲಿ ಪ್ರಾರಂಭವಾದ 'ಹರಿಜನ ಸೇವಕ ಸಂಘ'ದ ಜನಸಂಘಟನೆ ಮತ್ತು ಚಟುವಟಿಕೆಗಳಿಗಾಗಿ 1934 ರಲ್ಲಿ ಸಿದ್ದಪ್ಪ ಹೊಸಮನಿಯವರು ನಿಧಿಯನ್ನು ಸಂಗ್ರಹಿಸಿದರು. ಮುಂದೆ ಪುರಸಭೆ ಸಭೆಯ ಸದಸ್ಯರಾದ ಸಿದ್ದಪ್ಪ ರವರು

ಸಾರ್ವಜನಿಕ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪುರಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಅಂಗೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. "ಇನ್ನು ಮುಂದೆ ಕುಡಿಯುವ ನೀರಿನ ಏಕೈಕ ಕೊಳವನ್ನು ದಲಿತರಿಗೂ ಮುಕ್ತವಾಗಿಡಲಾಗುವುದು. ಅವರು ನೀರು ಮುಟ್ಟುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ."[6] ಈ ರೀತಿಯಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸಮಯದಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಕೆಲವರಲ್ಲಿ ಸಿದ್ದಪ್ಪ ಹೊಸಮನಿಯವರು ಪ್ರಮುಖರಾಗಿದ್ದಾರೆ.

**ಪದ್ಮಶ್ರೀ ಕಾಕಾ ಕಾರಖಾನೀಸ /ಗಣೇಶ ಗೋವಿಂದ ಕಾರಖಾನೀಸ(1890–1956):**

ಜಾತಿ ಎನ್ನುವ ಬಂಧನಕ್ಕಿಂತ ಮನುಷ್ಯತ್ವವೇ ಮುಖ್ಯವೆನ್ನುವ ಕಾಕಾ ಕಾರಖಾನೀಸರವರು ಸಾಮಾಜಿಕ ಸಮಾನತೆಗಾಗಿ ದಲಿತರ ಪರ ಶ್ರಮಿಸಿದವರಲ್ಲಿ ಪ್ರಮುಖರು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಇವರು ಸಮಾನಾಂತರವಾಗಿ ಸಾಮಾಜಿಕ ಚಳುವಳಿಯನ್ನು ಕೈಗೊಂಡರು. ಅಸ್ಪೃಶ್ಯತೆಯ ನಿವಾರಣೆ, ದೇವದಾಸಿ ಪದ್ಧತಿಯ ರದ್ದತಿ, ಜೋಗತಿ ಮತ್ತು ಬೆತ್ತಲೆ ಸೇವೆಗಳಂತಹ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ಶ್ರಮಿಸುವುದರ ಜೊತೆಗೆ ಬ್ರಾಹ್ಮಣ ಯುವಕರು ಮತ್ತು ವಿದ್ಯಾರ್ಥಿಗಳು ದಲಿತರ ಕೇರಿಗಳಿಗೆ ಹೋಗಿ ಅವರ ಅರವಟಿಗೆಯ ನೀರು ಕುಡಿಯುವುದು. 1931ರಲ್ಲಿ ಅಸ್ಪೃಶ್ಯತಾ ನಿವಾರಣಾ ಸಮಿತಿಯ ಕಾರ್ಯದರ್ಶಿಯಾಗಿ ದಲಿತರ ಪರ ಕೆಲಸಗಳನ್ನು ಕೈಗೊಂಡರು. ಹನುಮಂತರಾಯ ಕೌಜಲಗಿಯವರ ಆದೇಶದಂತೆ 'ಹರಿಜನ ಸೇವಕ ಸಂಘ' ವಿಜಯಪುರ ಶಾಖೆಯ ಜವಾಬ್ದಾರಿ ತೆಗೆದುಕೊಂಡು ಇಂದಿನಿಂದ ನಾನು ಸಹ ಹರಿಜನನಾದೆ ಎಂದರು. ಅಂದಿನ ಮೈಸೂರು ಸರಕಾರದ 'ಹರಿಜನ ಸೇವಕ ಸಂಘ'ದ ಉಪಾಧ್ಯಕ್ಷರು ಮತ್ತು ಕೇಂದ್ರ ಸರಕಾರದ ಪರಿಶಿಷ್ಟ ಜಾತಿ ಸಲಹಾ ಸಮಿತಿಯ ಸದಸ್ಯರಾಗಿ ದಲಿತರ ಏಳಿಗೆಗಾಗಿ ಶ್ರಮಿಸಿದರು. ದೇವದಾಸಿ ಹೆಣ್ಣುಮಕ್ಕಳಿಗಾಗಿ "ಅಹಲ್ಯೋದ್ಧಾರ" ಮಂದಿರವನ್ನು ಸ್ಥಾಪಿಸಿದರು. 1933ರಲ್ಲಿ ಅಜರೇಕರಶಾಲದಲ್ಲಿ ದಲಿತ ಗಂಡುಮಕ್ಕಳಿಗಾಗಿ ವಸತಿಗ್ರಹವನ್ನು ನಿರ್ಮಿಸಿದರು. 1938ರಲ್ಲಿ ದಲಿತ ಹೆಣ್ಣು ಮಕ್ಕಳಿಗಾಗಿ ದಲಿತ ಕನ್ಯಾ ಮಂದಿರವನ್ನು ಸ್ಥಾಪಿಸಿದರು.[7] ದಲಿತ ಮಕ್ಕಳಿಗೆ ಸ್ವತಃ ಸಂಸ್ಕೃತ ಕಲಿಸುತ್ತಿದ್ದ ಕಾಕಾರವರು ತಮ್ಮ ಕುಟುಂಬದಿಂದಲೇ ಬಹಿಷ್ಕಾರಕ್ಕೆ ಒಳಗಾಗಿದ್ದು ದುರಂತದ ಸಂಗತಿಯಾಗಿದೆ. ಇವರು "ಸಂತ ಮತ್ತು ಸಮಾಜ, ಸ್ವಾಮಿ ವಿವೇಕಾನಂದರ ಸಾಮಾಜಿಕ ವಿಚಾರಗಳು, ತುಕಾರಾಮ ಮಹಾರಾಜರ ಸಾಮಾಜಿಕ ವಿಚಾರಗಳು, ಶ್ರೀ ಸಮರ್ಥ ರಾಮದಾಸ ವಿಚಾರ ಮತ್ತು ಕಾರ್ಯ" ಎನ್ನುವ ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ.

**ಸರದಾರ ವೀರನಗೌಡ ಪಾಟೀಲ್ ಮತ್ತು ನಾಗಮ್ಮ ವೀರನಗೌಡ ಪಾಟೀಲ್ (1905–2002):**

ಪದ್ಮಶ್ರೀ ವೀರನಗೌಡ ಪಾಟೀಲರು ಸ್ವಾತಂತ್ರ್ಯ ಹೋರಾಟದ ಜೊತೆಗೆ ಶೈಕ್ಷಣಿಕವಾಗಿ ಬಹಿಷ್ಕರಿಸಿದ ದಲಿತರ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಮಹಾತ್ಮ ಗಾಂಧೀಜಿಯವರ ಆಶಯದಂತೆ ಪಾಟೀಲರು ದಲಿತ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಹುಬ್ಬಳ್ಳಿಯಲ್ಲಿ 'ಮಹಿಳಾ ವಿದ್ಯಾ ಪೀಠ'ವನ್ನು ಸ್ಥಾಪಿಸಿದರು. ಆದ್ದರಿಂದ ವೀರನಗೌಡ ಪಾಟೀಲರು ಹಾವೇರಿ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರದಲ್ಲಿ ಅದರಲ್ಲಿಯೂ ದಲಿತೋದ್ಧಾರರಾಗಿ ಮಹತ್ವದ ಸಾಧನೆ ಮಾಡಿದವರಾಗಿದ್ದಾರೆ.[8] ವೀರನಗೌಡ ಪಾಟೀಲರ ಪತ್ನಿಯಾದ ನಾಗಮ್ಮಳು ಮಹಾನ್ ಸಮಾಜ ಸುಧಾರಕಿ. ಗಾಂಧೀಜಿಯವರಿಂದ ಪ್ರಭಾವಿತರಾಗಿ ಸ್ಥಳೀಯ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. 1934ರಲ್ಲಿ ಹುಬ್ಬಳ್ಳಿಯಲ್ಲಿ ದಲಿತ ಮಹಿಳೆಯರಿಗೆ

'ಹರಿಜನ ಬಾಲಿಕಾ ಆಶ್ರಮವನ್ನು' ಸ್ಥಾಪಿಸಿದರು. 1937ರಲ್ಲಿ ಬ್ಯಾಡಗಿಯಲ್ಲಿ 2ನೇ ಬಾಲಿಕಾ ಆಶ್ರಮವನ್ನು ಆರಂಭಿಸಿದರು.[9] 1951 ರಲ್ಲಿ ಜವಾಹರ್‌ಲಾಲ್ ನೆಹರುರವರು ಈ ಆಶ್ರಮಕ್ಕೆ ಭೇಟಿ ನೀಡಿದಾಗ ಇದನ್ನು 'ಕಸ್ತೂರಿಬಾ ಬಾಲಿಕಾ ಆಶ್ರಮ' ಎಂದು ಮರುನಾಮಕರಣ ಮಾಡಿದರು. ದಲಿತ ಬಾಲಕಿಯರಿಗಾಗಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ದಂಪತಿಗಳ ಕೊಡುಗೆ ಸ್ಮರಣೀಯವಾಗಿದೆ.

**ಮಾಗೆನೂರು ಬಸಪ್ಪ (1900):**

1929ರಲ್ಲಿ ಗಾಂಧಿಜಿಯವರು ದಾವಣಗೆರೆಗೆ ಆಗಮಿಸಿದಾಗ ಅವರ ಪ್ರಭಾವದಿಂದ ಬಸಪ್ಪರವರು 1930ರಲ್ಲಿ ಕಾನೂನು ಭಂಗ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಇವರು ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅಲ್ಲಿನ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವುದರ ಜೊತೆಗೆ ಕರ್ನಾಟಕದಲ್ಲಿನ ಸಾಮಾಜಿಕ ಅಸಮಾನತೆ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಮುಂತಾದವುಗಳನ್ನು ವಿರೋಧಿಸಿದ ಮಹನೀಯರು. ಇವರು ದಲಿತೋದ್ಧಾರಕ್ಕಾಗಿ ಕೈಗೊಂಡ ಕಾರ್ಯಗಳೆಂದರೆ, 1934 ರಲ್ಲಿ ಕಾಸಲಾ ಶ್ರೀನಿವಾಸ ಶೆಟ್ಟರು, ನಾರಾಯಣರಾವ್ ಗಾಯಕ್ವಾಡ್, ಆರ್. ಜೆ. ಸಿದ್ದಪ್ಪ, ಕೆ.ಎಸ್. ಸಿದ್ದಪ್ಪ ಮುಂತಾದ ಅವರ ಜೊತೆ ಸೇರಿಕೊಂಡು 'ಹರಿಜನ ಸೇವಕ ಸಂಘ'ವನ್ನು ಸ್ಥಾಪಿಸಿಕೊಂಡರು. ಅದೇ ವರ್ಷ ದಲಿತ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ ಮಾಡಿಸಿದರು. ದಲಿತ ವಿದ್ಯಾರ್ಥಿಗಳಿಗೆ ಧನ ಸಹಾಯವನ್ನು ಮಾಡಿದ್ದಲ್ಲದೆ 10000/ ರೂಪಾಯಿಯಲ್ಲಿ ಅಡುಗೆ ಕೊಠಡಿಯನ್ನು ನಿರ್ಮಿಸಿದರು.[10]

**ಇತರೆ ಪ್ರಮುಖರು:**

ಸಂಡೂರು ತಾಲೂಕಿನ ಚೋರನೂರು ಗ್ರಾಮದ ಭಾಷಣದಿಂದ ಪ್ರಭಾವಿತರಾದ ವೀರಭದ್ರಯ್ಯ ಹಿರೇಮಠರು ದಲಿತರ ಶೈಕ್ಷಣಿಕ ಏಳಿಗೆಗೆ ಹಲವಾರು ಕಾರ್ಯಗಳನ್ನು ಕೈಗೊಂಡರು. ಮೈಸೂರು ಭಾಗದಲ್ಲಿ ದಲಿತೋದ್ಧಾರಕ್ಕಾಗಿ ಶ್ರಮಿಸಿದ ಪ್ರಮುಖರೆಂದರೆ ತಗಡೂರು ರಾಮಚಂದ್ರ ರಾಯರು, ಎಂ.ಎನ್ ಅಯ್ಯರ್, ಎಂ. ವೆಂಕಟ ಕೃಷ್ಣಯ್ಯ, ಎಂ. ಎನ್. ಜೋಯಿಸ್ ಮತ್ತು ಗೋವಿಂದಾಚಾರ್ಯ ಸ್ವಾಮಿ. 1856 ರಲ್ಲಿ ಜನಿಸಿದ ಗೋವಿಂದಾಚಾರ್ಯರು ದಲಿತರಿಗೆ ಶೈಕ್ಷಣಿಕ ಅರಿವು ಮೂಡಿಸುವುದರ ಜೊತೆಗೆ ಅವರ ಆರೋಗ್ಯದ ಮಹತ್ವದ ಬಗ್ಗೆಯೂ ಕಾಳಜಿವಹಿಸಿದರು. ದಲಿತರು ಶತಶತಮಾನಗಳಿಂದ ದೇವಸ್ಥಾನ ಮತ್ತು ಶಾಲೆಗಳಿಗೆ ಪ್ರವೇಶಾತಿ ಇಲ್ಲದಿರುವುದನ್ನು ಕಂಡು ಆ ಎರಡು ಸ್ಥಳಗಳಿಗೆ ಪ್ರವೇಶ ಕಲ್ಪಿಸುವ ಅನೇಕ ಕಾರ್ಯಗಳನ್ನು ಕೈಗೊಂಡರು.[11]

**ಕರ್ನಾಟಕದಲ್ಲಿ ದಲಿತೋದ್ಧಾರದ ಕಾರ್ಯಚಟುವಟಿಕೆಗಳು:**

ಭಾರತದಲ್ಲಿನ ಸಾಮಾಜಿಕ ಅನ್ಯಾಯದ ಪ್ರಮುಖ ನಿದರ್ಶನಗಳಲ್ಲಿ ಅಸ್ಪೃಶ್ಯತೆಯು ಒಂದಾಗಿದೆ. ಸವರ್ಣೀಯರು ಇವರನ್ನು ವ್ಯವಸ್ಥಿತವಾಗಿ ಭೌಗೋಳಿಕ, ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಂದ ಹೊರಗಿಟ್ಟಿದ್ದರು. ಬಾವಿ, ಶಾಲೆಗಳು ಮತ್ತು ದೇವಾಲಯಗಳನ್ನು ಬಳಸುವುದನ್ನು ನಿಷೇಧಿಸಲಾಗಿತ್ತು. ಈ ಬಹುಜನರ ಪ್ರಮುಖ ವೃತ್ತಿ ಸ್ವಚ್ಛಗೊಳಿಸುವುದು, ಪಾದರಕ್ಷೆಗಳನ್ನು ತಯಾರಿಸುವುದು, ಪಟ್ಟಣಗಳಲ್ಲಿನ ಒಳಚರಂಡಿ, ಬೀದಿ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಕಾರ್ಯ ಮಾಡುತ್ತಿದ್ದರು.[12] ಭಾರತದ ಇತರ ಭಾಗಗಳಂತೆ ಕರ್ನಾಟಕದಲ್ಲಿಯೂ ಸಹ ದಲಿತರ ಕಷ್ಟಗಳನ್ನು ನಿವಾರಿಸಲು ಅನೇಕ ಬುದ್ಧಿಜೀವಿಗಳು ಶ್ರಮಿಸಿದರು.

ಭಾರತದ ಇತಿಹಾಸದಲ್ಲಿ ಮಹಾತ್ಮ ಫುಲೆ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್,

ಛತ್ರಪತಿ ಶಾಹು ಮಹಾರಾಜ್ ಮತ್ತು ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯರ ಉನ್ನತಿಗಾಗಿ ಶ್ರಮಿಸಿದವರಲ್ಲಿ ಅಗ್ರಗಣ್ಯರಾಗಿದ್ದಾರೆ. 1917ರ ಕಲ್ಕತ್ತದ ಕಾಂಗ್ರೆಸ್ ಅಧಿವೇಶನದಲ್ಲಿ ಔಪಚಾರಿಕವಾಗಿ ದಲಿತೋದ್ಧಾರ ಕಾರ್ಯಕ್ರಮವನ್ನು ಕಾಂಗ್ರೆಸ್ ತನ್ನ ಕಾರ್ಯಕ್ರಮದ ಭಾಗವನ್ನಾಗಿ ಗುರುತಿಸಲಾಯಿತು. ಮಹಾತ್ಮ ಗಾಂಧೀಜಿಯವರು ತಮ್ಮ ಬರವಣಿಗೆ ಮತ್ತು ಭಾಷಣದ ಮೂಲಕ ಅಸ್ಪೃಶ್ಯತೆಯ ವಿರುದ್ಧ ಯುದ್ಧವನ್ನು ಪ್ರಾರಂಭಿಸಿದರು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ವಿಜಯಪುರದ ರಾಜಕೀಯ ಸಮ್ಮೇಳನದಲ್ಲಿ ಒಬ್ಬರು ಸಹ ದಲಿತರು ಇಲ್ಲದಿರುವುದನ್ನು ಕಂಡು ಗಾಂಧೀಜಿಯವರು ಮೌನವಹಿಸಿದ್ದು ಪ್ರಮುಖ ಘಟನೆಯಾಗಿತ್ತು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ 'ಪ್ರಾಂತೀಯ ಹರಿಜನ ಸೇವಕ ಸಂಘಗಳು' ಸ್ಥಾಪನೆ ಆದಾಗ ದಲಿತೋದ್ಧಾರ ಕಾರ್ಯ ಚಟುವಟಿಕೆಗಳು ಕಂಡು ಬಂದವು.

1933ರಲ್ಲಿ 'ಹರಿಜನ ಸೇವಕ ಸಂಘ' ಆರಂಭವಾದಾಗ ಕರ್ನಾಟಕವು ಈ ಚಳುವಳಿಯ ಮುಂಚೂಣಿಯಲ್ಲಿತ್ತು. ಇತರ ಶಾಖೆಗಳು ವಿಜಯಪುರದಲ್ಲಿ ಪ್ರಾರಂಭವಾದವು. ಹುಬ್ಬಳ್ಳಿಯನ್ನು ಪ್ರಧಾನ ಕಛೇರಿಯನ್ನಾಗಿ ಹೊಂದಿದ ಬೆಳಗಾವಿ, ಕಾರವಾರ, ಮಂಗಳೂರು, ಬಳ್ಳಾರಿ, ಕೊಡಗು ಮುಂತಾದ ಕಡೆ ಮಹಾತ್ಮ ಗಾಂಧೀಜಿಯವರು ಪ್ರವಾಸ ಕೈಗೊಂಡಾಗ ದಲಿತೋದ್ಧಾರ ಕುರಿತು ಭಾಷಣ ಮಾಡಿದರು. ಉತ್ತರ ಕರ್ನಾಟಕದ ದಲಿತೋದ್ಧಾರ ಚಳುವಳಿಗೆ ಸಂಬಂಧಿಸಿದಂತೆ ವೀರಣ್ಣಗೌಡ ಪಾಟೀಲ್ ಮತ್ತು ಅವರ ಪತ್ನಿಯನ್ನು ಉಲ್ಲೇಖಿಸುವುದು ಅತಿ ಮುಖ್ಯ. 'ಹರಿಜನ ಸೇವಕ ಸಂಘ'ದ ಕರ್ನಾಟಕ ಮಂಡಳಿಯ ಅಧ್ಯಕ್ಷರಾಗಿದ್ದು ಇವರ ಪ್ರಯತ್ನದಿಂದಾಗಿ 1954 ರಲ್ಲಿ ಹುಬ್ಬಳ್ಳಿಯಲ್ಲಿ ದಲಿತರ ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ 'ಬಾಲಿಕಾಶ್ರಮ'ವನ್ನು ಪ್ರಾರಂಭಿಸಲಾಯಿತು. ಇದು ಇಡೀ ಹಳೆ ಬಾಂಬೆ ಕರ್ನಾಟಕದಲ್ಲಿ ಈ ರೀತಿಯ ಏಕೈಕ ಸಂಸ್ಥೆ ಎನ್ನುವುದು ಕರ್ನಾಟಕಕ್ಕೆ ಹೆಮ್ಮೆಯ ಸಂಗತಿ ಆಗಿದೆ. ಇವರ ಜೊತೆಗೆ ದಲಿತರ ಏಳಿಗೆಗಾಗಿ ಸಕ್ರಿಯವಾಗಿ ಭಾಗವಹಿಸಿದವರು ಸ್ವಾತಂತ್ರ್ಯ ಚಳುವಳಿಯ ಮಹಾನ್ ನಾಯಕರಾದ ಮೈಲಾರ ಮಹಾದೇವಪ್ಪ ರವರ ಪತ್ನಿ ಶ್ರೀಮತಿ ಸಿದ್ಧಮತಿ ಮೈಲಾರ. ಇನ್ನು ಹಳೆ ಮೈಸೂರು ಭಾಗದಲ್ಲಿ ಗೋಪಾಲಸ್ವಾಮಿ ಅಯ್ಯಂಗಾರ್, ಎಚ್.ಸಿ. ದಾಸಪ್ಪ ಮತ್ತು ಶ್ರೀಮತಿ ಯಶೋಧರಮ್ಮ ದಾಸಪ್ಪರನ್ನೊಳಗೊಂಡಂತೆ ಮೈಸೂರು ಸರ್ಕಾರವು ದಲಿತ ವಿದ್ಯಾರ್ಥಿಗಳಿಗೆ ವಸತಿ ನಿಲಯ ಶಿಷ್ಯವೇತನ ಕೊಟ್ಟು ಪ್ರಮುಖ ಪಾತ್ರ ವಹಿಸಿತು.

ಲಕ್ಷ್ಮೀನಾರಾಯಣ ಪುಣಿಂಚತ್ತಾಯಾರವರ ಕವಿತೆ 'ಹರಿಜನ ಸಂಧಾನ'ವು ಕೂಡ ಪ್ರಮುಖ ಪ್ರಭಾವ ಎನ್ನಬಹುದು. ರಾಯಚೂರಿನಲ್ಲಿ ಪಂಡಿತ ತಾರನಾಥರು ತಮ್ಮ ಭಾಷಣಗಳಲ್ಲಿ ದಲಿತ ಹೋರಾಟವನ್ನು ಪ್ರತಿಪಾದಿಸಿದರು. ಹರ್ಡೇಕರ್ ಮಂಜಪ್ಪ ರವರು 'ಆದಿ ಜನರ ಸುಧಾರಣೆ' ಎನ್ನುವ ಪುಸ್ತಕವನ್ನು ಬರೆದು ದಲಿತರ ಉನ್ನತಿಗಾಗಿ ಶ್ರಮಿಸಿದರು. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ದಲಿತ ಚಳುವಳಿಯನ್ನು ಅಥವಾ ದಲಿತೋದ್ಧಾರದ ಪ್ರಭಾವವನ್ನು ನಿಖರತೆಯಿಂದ ನಿರ್ಣಯಿಸುವುದು ಕಷ್ಟ. ಅದಾಗ್ಯೂ ಇದು ಹಳೆಯ ಅಡೆತಡೆಗಳನ್ನು ಮರೆಯಲು ಯಶಸ್ವಿಯಾಯಿತೆನ್ನಬಹುದು. ದಲಿತರನ್ನು ರಾಷ್ಟ್ರೀಯತೆ ಅಡಿಯಲ್ಲಿ ತರಲು ಸಹಾಯಕವಾಯಿತು.

**ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖ ದಲಿತ ಕಾರ್ಯಕರ್ತರು ಹಾಗೂ ನಾಯಕರು:**

ಭಾರತದ ಸ್ವಾತಂತ್ರ್ಯ ಚಳುವಳಿಯು ಒಂದು ವರ್ಗಕ್ಕೆ ಸೀಮಿತವಾಗಿರದೆ ಅಸಂಖ್ಯಾತ

ಮತ್ತು ಅಜ್ಞಾತ ಬಲಿದಾನದ ಫಲಿತಾಂಶವಾಗಿದೆ. ದುರಾದೃಷ್ಟವಶಾತ್ ಆರಂಭದ ಭಾರತೀಯ ಇತಿಹಾಸಕಾರರು ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ಕೆಳವರ್ಗದವರ ಇತಿಹಾಸದ ಗೋಜಿಗೆ ಹೋಗಲಿಲ್ಲ. ವಸಹಾತುಶಾಹಿ ನೀತಿಗಳನ್ನು ವಿರೋಧಿಸಿದ ದಲಿತ ಸಮುದಾಯದ ಕೆಲವು ಪ್ರಮುಖ ಘಟನೆ ಮತ್ತು ವ್ಯಕ್ತಿಗಳನ್ನು ಈ ಮುಂದಿನಂತೆ ತಿಳಿಸಲಾಗಿದೆ. 1932ರ ಸೆಪ್ಟೆಂಬರ್ 28ರಂದು 'ಅಖಿಲ ಭಾರತ ಅಸ್ಪೃಶ್ಯತಾ ವಿರೋಧಿ ಸಂಘ' ಅಸ್ತಿತ್ವಕ್ಕೆ ಬಂದಿತು. ಮುಂದೆ ಈ ಸಂಘವು 'ಹರಿಜನ ಸೇವಕ ಸಂಘ' ಎಂದು ಮರುನಾಮಕರಣ ಪಡೆದುಕೊಂಡಿತು. ಈ ಸಂಘದ ದಾವಣಗೆರೆಯ ಕಾರ್ಯ ಸಮಿತಿಯು ಹಲವು ದಲಿತರನ್ನು ಒಳಗೊಂಡಿದ್ದು, ಸಾಮಾಜಿಕ ಚಳುವಳಿ ಮತ್ತು ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕಾಗಿ ಶ್ರಮಿಸಿತು. ಈ ಶಾಖೆಯ ಪದಾಧಿಕಾರಿಗಳೆಂದರೆ, ಅಧ್ಯಕ್ಷರಾದ ಆರ್.ಜಿ. ಸಿದ್ದಪ್ಪ, ಕೋಶಾಧ್ಯಕ್ಷರಾದ ಮಾಗನೂರು ಬಸಪ್ಪ, ಕಾರ್ಯದರ್ಶಿಯಾದ ಕೆ.ಎಸ್. ಸಿದ್ದಪ್ಪ ಹಾಗೂ ಕಾಸಲ್ ಅನಂತ ಶ್ರೇಷ್ಟಿ, ಲಕ್ಷ್ಮಪ್ಪ ಮತ್ತು ಗಾಯಕವಾಡ ನಾರಾಯಣ ಎನ್ನುವ ಸದಸ್ಯರನ್ನು ಒಳಗೊಂಡಿತ್ತು.[13] ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಪ್ರಮುಖ ನಾಯಕ ಮತ್ತು ಇತಿಹಾಸದ ಬೆಳಕಿನಲ್ಲಿ ಬಾರದ ಆಯ್ದ ಕಾರ್ಯಕರ್ತರ ವಿವರಣೆಯು ಈ ಕೆಳಗಿನಂತಿದೆ.

**ದೇವರಾಯ ಇಂಗಳೆ (1889):**

ದೇವರಾಯ ಇಂಗಳೆಯವರು ದಲಿತ ಕುಟುಂಬದವರಾದ್ದರಿಂದ ಹಸಿವು, ಬಡತನ ಮತ್ತು ಅಸ್ಪೃಶ್ಯತೆಯ ಅನುಭವಗಳನ್ನು ಬಾಲ್ಯದಲ್ಲಿಯೇ ಪರಿಚಯವಾದವು. ಬೆಳಗಾವಿ ಜಿಲ್ಲೆ ಮತ್ತು ದಕ್ಷಿಣ ಮಹಾರಾಷ್ಟ್ರದ ಕೆಲವು ಹಳ್ಳಿಗಳಲ್ಲಿ ದಲಿತರ ಕೇರಿಗಳನ್ನು ನೋಡಿದ ಇಂಗಳೆಯವರು ಅಲ್ಲಿನ ದಲಿತರ ಜೀವನವನ್ನು ಕಂಡು ಮರುಗಿ ಶಿಕ್ಷಣದಿಂದ ಮಾತ್ರ ದಲಿತರ ಪ್ರಗತಿ ಸಾಧ್ಯ ಎಂಬುದನ್ನು ಮನಗಂಡರು. ಇದೇ ದಶಕದಲ್ಲಿ ಬೆಳಗಾವಿಯ ಗಡಿ ಭಾಗ ಮತ್ತು ಮಹಾರಾಷ್ಟ್ರದಾದ್ಯಂತ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆ ಹಾಗೂ ಹೋರಾಟ ತೀವ್ರವಾದ್ದರಿಂದ ಇಂಗಳೆಯವರು ಅವರೊಂದಿಗೆ ಪತ್ರದ ಮೂಲಕ ತಮ್ಮ ಯೋಜನೆಗಳನ್ನು ಕುರಿತು ಚರ್ಚಿಸುತ್ತಾರೆ. ತಮ್ಮ ಮುಂದಿನ ಸಾಮಾಜಿಕ ಹೋರಾಟಳನ್ನು ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲೇ ತಮ್ಮೆಲ್ಲಾ ಹೋರಾಟಗಳನ್ನು ರೂಪಿಸುತ್ತಾರೆ.

ಚಿಕ್ಕೋಡಿ ಮತ್ತು ನಿಪ್ಪಾಣಿ, ಭಾಗಗಳಲ್ಲಿ ಮಹಾತ್ಮ ಫುಲೆ, ಡಾ. ಅಂಬೇಡ್ಕರ್ ತತ್ವಗಳಿಂದ ಪ್ರಭಾವಿತರಾಗಿದ್ದ "ಚಂಪಾಬಾಯಿ ಭೋಗಲೆ, ದತ್ತಾಕಟ್ಟಿ, ಪಿ.ಪಿ. ಹೆಗ್ಡೆ, ಭವಾನೆ, ಬಲವಂತರಾವ್ ವರಾಳೆ," ಮುಂತಾದ ದಲಿತ ಯುವಕಯುವತಿಯರನ್ನು ಸಂಘಟಿಸಿದ ಇಂಗಳೆಯವರು ತಮ್ಮ ಹೋರಾಟವನ್ನು ವಿಸ್ತರಿಸಿದರು. ಈ ಹಿನ್ನಲೆಯಲ್ಲಿ ಇಂಗಳೆಯವರು ದಲಿತೋದ್ಧಾರಕರಾಗಿ ಮಾಡಿದ ಪ್ರಮುಖ ಕಾರ್ಯಗಳೆಂದರೆ, ಸರ್ಕಾರಿ ವಸತಿ ಶಾಲೆ ಸ್ಥಾಪನೆಗಾಗಿ ಮಾಡಿದ ಹೋರಾಟ ಮತ್ತು ಧಾರವಾಡದ ಕಾಲೇಜಿನಲ್ಲಿ ಮೀಸಲಾತಿ ಜಾರಿಗೆ ಬಂದಿತು. 1927ರಲ್ಲಿ 'ಭಾರತೀಯ ಬಹಿಷ್ಕೃತ ಸಮಾಜ ಶಿಕ್ಷಣ ಪ್ರಸಾರಕ ಮಂಡಳಿ' ಮತ್ತು 'ಬೆಳಗಾವಿ ಜಿಲ್ಲಾ ವತನದಾರ್ ಮಹಾರ್ ಸಂಘ'ಗಳನ್ನು ಸ್ಥಾಪಿಸಿದ ಇಂಗಳೆಯವರು ದಲಿತರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಪ್ರಗತಿಗಾಗಿ ಶ್ರಮಿಸತೊಡಗಿದರು. ಜಾತಿ ವಿನಾಶ ಚಳವಳಿ, ಅಸ್ಪೃಶ್ಯತಾ ವಿರೋಧಿ, ದಲಿತರು ಸತ್ತ ದನ ತಿನ್ನುವುದನ್ನು ತಡೆಗಟ್ಟುವುದು, ದೇವದಾಸಿ ಪದ್ಧತಿಯ ನಿರ್ಮೂಲನೆ, ದಲಿತರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಅವರಲ್ಲಿ ಜಾಗೃತಿ ಮೂಡಿಸುವುದು.[14]

**ದೇವಮ್ಮ ಹರಿಜನ:**

ದಲಿತ ಅನಕ್ಷರಸ್ಥ ಮಹಿಳೆಯಾದ ದೇವಮ್ಮ ಹಾಗೂ ಅವರ ಕುಟುಂಬ ಸಿದ್ಧಾಪುರದ ಕೆಳಗಿನಮನೆಯ ನಾಗೇಶ್ ಹೆಗ್ಗಡೆಯವರ ಎಸ್ಟೇಟ್‌ನಲ್ಲಿ ಕಾರ್ಮಿಕರಾಗಿದ್ದರು. ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಬ್ರಿಟಿಷರಿಂದ ಗುರುತಿಸಲ್ಪಟ್ಟಳು. ಮುಂದೆ ತೋಟದ ಮಾಲೀಕರು ಸಹ ಈ ಚಳುವಳಿಯಲ್ಲಿ ಭಾಗವಹಿಸಿದ್ದರಿಂದ ತೋಟದ ಮಾಲೀಕರನ್ನು ಸಹ ಬಂಧಿಸಿ ತೋಟವನ್ನು ಒತ್ತುವಳಿ ಮಾಡಿಕೊಂಡರು. ಈ ಕಾರಣದಿಂದ ಜೀವನದ ಮೂಲವನ್ನೇ ಕಳೆದುಕೊಂಡ ದೇವಮ್ಮಳು ಸಾಗರಕ್ಕೆ ಬಂದಳಾದರೂ ಬ್ರಿಟಿಷರು ಅವಳ ಶತ್ರುಗಳಾಗಿ ದೇವಮ್ಮಾಳಿಗೆ ಹಾಗೂ ಅವಳ ಕುಟುಂಬಕ್ಕೆ ಕೆಲಸವಿಲ್ಲದಂತೆ ನೋಡಿಕೊಂಡರು. ದೇವಮ್ಮಳು ತನ್ನ ಮರಣದವರೆಗೂ ಬ್ರಿಟಿಷರ ವಿರುದ್ಧ ಹೋರಾಡಿದ್ದು ಇತಿಹಾಸದಲ್ಲಿ ಸ್ಮರಣೀಯ ಘಟನೆಯಾಗಿದೆ.[15] ಈ ಗೌರವಕ್ಕೆ ಕರ್ನಾಟಕ ಸರ್ಕಾರವು ಗೌರವಧನವನ್ನು ನೀಡಿದಾಗ ಅದನ್ನು ನಿರಾಕರಿಸಿ ಇದು ತನ್ನ ರಾಷ್ಟ್ರಕ್ಕೆ ಮಾಡಿದ ಸೇವೆ ಎಂದು ಇತಿಹಾಸದಲ್ಲಿನ ಎಲೆಮರೆಯ ಕಾಯಿಯಂತೆ ಸ್ವಾತಂತ್ರ್ಯ ಹೋರಾಟದ ಪ್ರಮುಖ ವ್ಯಕ್ತಿಯಾಗಿದ್ದಾಳೆ.

**ಗುಡ್ಡಪ್ಪ ಹರಿಜನ:**

ಹಾವೇರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಗುಡ್ಡಪ್ಪ ಹರಿಜನರವರ ಮಾಹಿತಿಯು ಬಹಳಷ್ಟು ಲಭ್ಯವಿಲ್ಲ. 201516 ರಲ್ಲಿ ದೇವೆಂದ್ರಪ್ಪ ವಿಭೂತಿ, ಪರಮಣ್ಣ ಎಲ್. ಹರಕಂಗಿ ಮತ್ತು ಗುಡ್ಡಪ್ಪ ಹರಿಜನರ ಸಂದರ್ಶನಗಳಿಂದ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಇವರು ನೀಡಿದ ಕೊಡುಗೆಗಳು ಬೆಳಕಿಗೆ ಬಂದವು. ಗಾಂಧೀಜಿಯವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಗುಡ್ಡಪ್ಪ ಹರಿಜನರು ತಮ್ಮ ಭಾಗದಲ್ಲಿ ದಲಿತರ ಏಳಿಗೆಗಾಗಿ ಶ್ರಮಿಸಿದರು. ಹಾವೇರಿ ಭಾಗದ ದಲಿತರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಹಿಂದುಳಿದಿರುವಿಕೆಯನ್ನು ಮುನ್ನೆಲೆಗೆ ತರುವುದರಲ್ಲಿ ಇವರ ಪಾತ್ರವು ಪ್ರಮುಖವಾಗಿದೆ.

**ಉಪಸಂಹಾರ:**

ಅಸ್ಪೃಶ್ಯತೆ ಎನ್ನುವುದು ಭಾರತೀಯ ಸಮಾಜದಲ್ಲಿ ಬೆಳೆದು ಬಂದಂತಹ ಅನಿಷ್ಟ ಪದ್ಧತಿಯಾಗಿದ್ದು ಈ ಕಳಂಕವನ್ನು ನಿರ್ಮೂಲನೆ ಮಾಡುವಲ್ಲಿ ಮಹಾತ್ಮ ಬುದ್ಧರು, ಬಸವಣ್ಣ, ಡಾ. ಬಾಬಾ ಸಾಹೇಬರ ಆದಿಯಿಂದ ಹಿಡಿದು, ಪ್ರಸ್ತುತವರೆಗೂ ಅಸಂಖ್ಯಾತ ಮಹನೀಯರು ಶ್ರಮಿಸಿದರೂ ಸಂಪೂರ್ಣವಾಗಿ ಕೊನೆಗಾಣದಿರುವುದು ದುರಂತವೇ ಸರಿ. ಹೈದರಾಬಾದ್ ಕರ್ನಾಟಕದಲ್ಲಿ ಶಾಮ್ ಸುಂದರ್‌ರವರ ಪಾತ್ರ ಪ್ರಮುಖವಾದರೆ, ಬಾಂಬೆ ಕರ್ನಾಟಕ ಮತ್ತು ಹಳೆ ಮೈಸೂರು ಭಾಗದಲ್ಲಿ ದಲಿತ ನಾಯಕರು ಮತ್ತು ದಲಿತೇತರ ಕಾರ್ಯ ಚಟುವಟಿಕೆಗಳು ಪ್ರಮುಖವಾಗಿವೆ. ಒಟ್ಟಾರೆಯಾಗಿ ಕರ್ನಾಟಕವು ತನ್ನ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಏಕೀಕರಣ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಮಾತ್ರವಲ್ಲದೆ ಸಾಮಾಜಿಕ ಚಳುವಳಿಗಳಾದ ಜಾತಿಯ ನಿರ್ಮೂಲನೆ, ಅಸ್ಪೃಶ್ಯತೆಯ ರದ್ಧತಿ ಹಾಗೂ ದಲಿತೋದ್ಧಾರ ಕಾರ್ಯ ಚಟುವಟಿಕೆಗಳನ್ನು ಸಹ ಕಂಡಿತು.

**ಕೊನೆ ಟಿಪ್ಪಣಿಗಳು:**


1. ಮುಗಳಿ ಎಸ್.ವಾಯ್., "ಪೂನಾ ಒಪ್ಪಂದ ಪೂರ್ವ ಶೋಷಿತ ಸಮುದಾಯದ ಬಗೆಗಿನ ಕಾಂಗ್ರೇಸ್ ಧೋರಣೆ" ಪ್ರೋ. ಎಸ್. ರಾಜಶೇಖರ ದತ್ತಿ ಉಪನ್ಯಾಸ. TKHA Studies in Karnataka history and culture vol, 19, 2022. pp 663
2. ಅದೇ, ಪು.ಸಂ. 665–666.
3. ಬಸೆಟ್ಟಿ, ಎಸ್.ಬಿ. "ರಚನಾತ್ಮಕ ಕಾರ್ಯಕ್ರಮ : ಗಾಂಧೀ ಕನಸಿನ ಭಾರತದ ಅಡಿಪಾಯ", ಶ್ರೀ ಬಸವರತ್ನ ಪ್ರಕಾಶನ ಧಾರವಾಡ2021 ಪು.ಸಂ. 15–16.
4. ಅದೇ, ಪು.ಸಂ
5. ಅಪ್ಪಗೆರೆ ಸೋಮಶೇಖರ್, "ದಲಿತ ಸಂವೇದನೆಅಂಬೇಡ್ಕರ್ ವಾದಿ ಚಿಂತನೆಯ ಬರಹಗಳು" ಲಡಾಯಿ ಪ್ರಕಾಶನ ಗದಗ2016, ಪು.ಸಂ. 41–43.
6. Mugali S.Y, "Shri Hosamami Siddappa and The Upliftment of The Depressed Class–es." Review Of Research Vol. 3 । Issue. 9 । June. 2014, ISSN:2249894X. P.No 14.
7. ಅಪ್ಪಗೆರೆ ಸೋಮಶೇಖರ್, "ದಲಿತ ಸಂವೇದನೆಅಂಬೇಡ್ಕರ್ ವಾದಿ ಚಿಂತನೆಯ ಬರಹಗಳು" ಲಡಾಯಿ ಪ್ರಕಾಶನ ಗದಗ2016, ಪು.ಸಂ. 33–34.
8. Nagaraj Veerabhadrappa, "Social Awareness In The National Movement: Haveri Distirct" Indian Streams Research Journal ISSN: 22307850 Volume 10 । Issue 11 । December 2020 P.No6
9. Nagamma Veerangouda patil, https://indianculture .gov.in.
10. ದೇವರಕೊಂಡಾರೆಡ್ಡಿ, ಶ್ರೀ ಜಿ.ಕೆ. ದೇವರಾಜ ಸ್ವಾಮಿ (ಸಂ), "ಇತಿಹಾಸ ದರ್ಶನ ಸಂಪುಟ 29" ಪು.ಸಂ. 483
11. ಗಾಯತ್ರಿ ಜೆ.ವಿ. "ದಲಿತರ ಉದ್ಧಾರಕ್ಕಾಗಿ ದುಡಿದ ಗೋವಿಂದಾಚಾರ್ಯಸ್ವಾಮಿ" ಇತಿಹಾಸ ದರ್ಶನ ಸಂಪುಟ. 9. ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು 1994, ಪು.ಸಂ. 233.
12. Halappa G.S. "History of freedom movement in Karnataka vol 2" Government of Mysore publication 1964, pp 437.
13. ಕೃಷ್ಣಮೂರ್ತಿ ಸಿ.ಎನ್. "ದಾವಣಗೆರೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ: ಒಂದು ಅಧ್ಯಯನ", ಸಂಶೋಧನಾ ಮಹಾಪ್ರಬಂಧ ಇತಿಹಾಸ ವಿಭಾಗ ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ವಿಜಯಪುರ – 2016, ಪು.ಸಂ. 2425.
14. ಅಪ್ಪಗೆರೆ ಸೋಮಶೇಖರ್, ಪು.ಸಂ. 88.
15. Meenakshi M.G., "The rule of backward class leaders in the movement for respon–sible government in the princely state of mysore" Ph.D Thesis department of history Bangalore University 2012, pp 291.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.